ಶ್ರೀ ಕೆ ಪಿ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಕೆಲವು ಕಡೆಗಳಲ್ಲಿ ಅಂಗನವಾಡಿ ಕೇಂದ್ರಗಳು ಹಾಳು ಮಂಟಪಗಳಲ್ಲಿ ನಡೆಯುತ್ತಿವೆಯಾದ್ದರಿಂದ ಸ್ವಂತ ಕಟ್ಟಡಗಳನ್ನು ಮಾಡಿಕೊಡಬೇಕೆಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಮಾನ್ಯ ಅಧ್ಯಕ್ಷರೇ, ನಾನು ನನ್ನ ಎರಡು ವರ್ಷದ ಅಧಿಕಾರದಲ್ಲಿ ನೋಡಿದಾಗ ಪ್ರತಿಯೊಬ್ಬ ಸದಸ್ಯರು ಕೂಡ ಅವರವರ ಕ್ಷೇತ್ರದ ಜವಾಬ್ದಾರಿಯಲ್ಲಿ ಇಲ್ಲಿಯವರೆಗೆ ಒಂದೇ ಒಂದು ಅಂಗನವಾಡಿ ಕಟ್ಟಡಕ್ಕೆ ಯಾವುದೇ ನಿಧಿಯನ್ನು ಕೊಟ್ಟಿಲ್ಲ. ಇದು ನಮ್ಮ ಜವಾಬ್ದಾರಿ ಕೂಡ ಇದೆ.

(ಗೊಂದಲ)

ಅಧ್ಯಕ್ಷರು: ಆಯಿತು , ಕೊಟ್ಟಿದ್ದಾರೆ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಇದು ನಮ್ಮ ಇಲಾಖೆಯಿಂದ ನಡೆಯುತ್ತಿರುವ ಕೇಂದ್ರದ ಅನುಮೋದಿತ ಯೋಜನೆ. ಕೇಂದ್ರದ ಅನುಮೋದಿತ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವಂತಹ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಒಂದೇ ಒಂದು ಕಟ್ಟಡಕ್ಕೆ ನಿಧಿ ಕೂಡ ಬಂದಿಲ್ಲ. ಇದಕ್ಕೆ ಎಲ್ಲೂ ಕೂಡ ಒತ್ತಾಯವಿಲ್ಲ. ಜೊತೆಗೆ ಜಿಲ್ಲಾಪಂಚಾಯಿತಿ ವ್ಯಾಪ್ತಿಯಿಂದ ನಮ್ಮ ಇಲಾಖೆಯ ಕಾರ್ಯಕ್ರಮ ಪೂರ್ತಿಯಾಗಿ ನಡೆಯುತ್ತದೆ. ಒಂದೇ ಒಂದು ಜಿಲ್ಲಾ ಪಂಚಾಯಿತಿಯಿಂದ ಕಟ್ಟಡಕ್ಕೆ ಕ್ರಿಯಾ ಯೋಜನೆಯಲ್ಲಿ ಇಲ್ಲಿಯವರೆಗೂ ನಿರ್ಣಯ ಕೊಟ್ಟಿಲ್ಲ. ದಯಮಾಡಿ ಇದನ್ನು ಸದನದ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಈಗ ಒಂದು ಗಂಟೆ ಆಯಿತು, ನಾನು ಎ.ಎಸ್. ಪಾಟೀಲ್‌ರವರನ್ನು ಕರೆದಿದ್ದೇನೆ. ಪಾಟೀಲ್ ತಾವು ಕೇಳಿ. ನಾನು ಹಿಂದಿನ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ. ಈಗಾಗಲೇ ಒಂದು ಗಂಟೆ ಸಮಯ ಆಗಿಹೋಗಿದೆ, ಹತ್ತು ನಿಮಿಷ ಬಾಕಿ ಇದೆ, ನಾನು ಉಳಿದ ಪ್ರಶ್ನೆಗಳನ್ನು ಬಿಡಬೇಕಾಗುತ್ತದೆ. ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ. ಈಗ ಪಾಟೀಲ್‌ರವರು ಪ್ರಶ್ನೆಯನ್ನು ಕೇಳಿ.

ಬಿಜಾಪುರ ಕ್ಷೇತ್ರ ವ್ಯಾಪ್ತಿಯ ಆಸ್ಪತ್ರೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಬಗ್ಗೆ

55(367) ಶ್ರೀ ಪಾಟೀಲ್ ಎ ಎಸ್:(ನಡಹಳ್ಳಿ) (ದೇವರ ಹಿಪ್ಪರಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸರಕಾರಿ ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಕೇಂದ್ರಗಳಲ್ಲಿ ಸುಮಾರು ವಿವಿಧ 54 ಹುದ್ದೆಗಳು ಖಾಲಿ ಇದ್ದು, ಇದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಆ) ಬಂದಿದ್ದಲ್ಲಿ, ಪ್ರಸ್ತುತ ಕೌನ್ಸಿಲಿಂಗ್ ನಂತರ ದೇವರಹಿಪ್ಪರಗಿ ಕ್ಷೇತ್ರದ ವಿವಿಧ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವೈದ್ಯಾಧಿಕಾರಿಗಳ ಹುದ್ದೆಯಲ್ಲಿ ಎಷ್ಟು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇವೆ, ಖಾಲಿಯಿರುವ ಆಸ್ಪತ್ರೆಗಳು ಯಾವುವು?

ಇ) ಸರಕಾರಿ ಆಸ್ಪತ್ರೆಗಳಲ್ಲಿ ಪ್ರಸ್ತುತ 'ಡಿ' ಗ್ರೂಪ್ ನೌಕರರನ್ನು ನೇಮಕಾತಿ ಮಾಡಲು ನಿಷೇಧ ಮಾಡಲಾಗಿದೆಯೆ?

ಈ) ಮಾಡಿದ್ದಲ್ಲಿ, ನೇಮಕ ನಿಷೇಧ ಮಾಡಲು ಕಾರಣಗಳೇನು?

ಉ) ನಿಷೇಧದಿಂದ ಆಸ್ಪತ್ರೆಗಳ ಸ್ವಚ್ಛತೆ ಕೆಲಸಕ್ಕೆ ತೊಂದರೆಯಾಗುವುದಿಲ್ಲವೆ; ಇದ್ದಲ್ಲಿ, ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹುದ್ದೆಗಳು ಖಾಲಿ ಇರುವುದು ಗಮನಕ್ಕೆ ಬಂದಿದೆ. ಲಭ್ಯವಿರುವ ಸಿಬ್ಬಂದಿಗೆ ಹೆಚ್ಚುವರಿ ಹೊಣೆಗಾರಿಕೆ ನೀಡುವ ಮೂಲಕ ರೋಗಿಗಳಿಗೆ ತೊಂದರೆಯಾಗದಂತೆ ಸೇವೆ ಒದಗಿಸಲಾಗುತ್ತದೆ.

ಆ)ದೇವರಹಿಪ್ಪರಗಿ ಕ್ಷೇತ್ರದಲ್ಲಿ ಖಾಲಿ ಇದ್ದ 6 ವೈದ್ಯಾಧಿಕಾರಿಗಳ ಹುದ್ದೇಗಳ ಪೈಕಿ ಕೌನ್ಸಿಲಿಂಗ್‌ನಲ್ಲಿ ಒಂದು ಹುದ್ದೆಯನ್ನು ತುಂಬಲಾಗಿದೆ. ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿವೆ:–

1. ಸಮುದಾಯ ಆರೋಗ್ಯ ಕೇಂದ್ರ -- ಕಲಕೇರಿ – 4 ಹುದ್ದೆಗಳು

2.ಪ್ರಾಥಮಿಕ ಆರೋಗ್ಯ ಕೇಂದ್ರ -- ವಡವಡಗಿ – 1 ಹುದ್ದೆ

ಇ) ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಗ್ರೂಪ್-ಡಿ ವೃಂದದ ಸಿಬ್ಬಂದಿಯನ್ನು ನೇರ ನೇಮಕಾತಿ ಮಾಡುವ ಬದಲು ಬಾಹ್ಯ ಮೂಲದಿಂದ ಸೇವೆಯನ್ನು ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ.

ಈ) ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಗ್ರೂಪ್-ಡಿ ವೃಂದದ ಸೇವೆಯನ್ನು ಬಾಹ್ಯ ಮೂಲದಿಂದ ಪಡೆದು ಸ್ವಚ್ಛತೆ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಶ್ರೀ ಪಿ ಬಸ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಬರೆದಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಾನು ಮೊದಲನೇ ಪ್ರಶ್ನೆ ಕೇಳುವುದೇನೆಂದರೆ ತಾವು ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಯಾವಾಗ review meeting ಮಾಡುತ್ತೀರಿ? ಅದಕ್ಕೆ ನಾವು ಬಹಳ ದಿವಸಗಳಿಂದ ಕಾಯತ್ತಿದ್ದೇವೆ. Atleast ಒಂದು ಬಾರಿಯಾದರೂ ತಾವು review meeting ಮಾಡಿದರೆ ಅಲ್ಲಿನ ವಾಸ್ತವಿಕ ಸ್ಥಿತಿ ಏನಿದೆ ಎನ್ನುವುದು ತಮಗೆ ಗೊತ್ತಾಗುತ್ತದೆ. ತಾವು ಯಾವಾಗ ಬರುತ್ತೀರೆಂದು ಹೇಳಿದರೆ ನಾವೆಲ್ಲರೂ ಕೂಡ ಅಲ್ಲಿ ತಮ್ಮ ಜೊತೆಗೆ ಬಂದು Practical ಆಗಿ ನೋಡಿದರೆ ಅಲ್ಲಿರುವಂತಹ ಆಸ್ಪತ್ರೆಗಳ ಸ್ಥಿತಿ ಏನಾಗಿದೆ ಎಂದು ಗೊತ್ತಾಗುತ್ತದೆ ಎನ್ನುವುದು ನನ್ನ ಮೊದಲನೆಯ ಉಪಪ್ರಶ್ನೆ. ಎರಡನೆಯದಾಗಿ ನನ್ನ ಕ್ಷೇತ್ರದಲ್ಲಿ 54 ಹುದ್ದೇಗಳು ಖಾಲಿ ಇವೆ, ಆ ಹುದ್ದೆಗಳನ್ನು ತುಂಬುವುದಕ್ಕೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಕಳೆದ ಅಧಿವೇಶನದಲ್ಲಿ ತಾವು ಉತ್ತರ ಕೊಟ್ಟಿದ್ದಿರಿ. ಆದರೆ ಒಂದು ವಿಚಾರವನ್ನು ನಾನು ಕೇಳುವುದೇನೆಂದರೆ, ನನ್ನ ಮತಕ್ಷೇತ್ರ ದೇವರ ಹಿಪ್ಪರಗಿ. ಆ ಮತಕ್ಷೇತ್ರದ ಹೋಬಳಿಯಲ್ಲಿ ಒಂದು ಬಿಜಾಪುರ ಮತ್ತು ಗುಲ್ಬರ್ಗ ಹೈವೇ ಬರುತ್ತದೆ. ಅಲ್ಲಿ ಅಪಘಾತಗಳು ಬಹಳಷ್ಟು ಆಗುತ್ತವೆ. ಅಲ್ಲಿಗೆ ಕನಿಷ್ಟ ಇಬ್ಬರು ವೈದ್ಯಾಧಿಕಾರಿಗಳು ಪ್ರತಿನಿತ್ಯ ಪೋಸ್ಟ್‌ಮಾರ್ಟಂ ನೋಡಿಕೋಳ್ಳುವುದಕ್ಕೆ ಬೇಕಾಗುತ್ತಾರೆ.

ಅಧ್ಯಕ್ಷರು: ಆಯಿತು, ತಾವು ಖಾಲಿ ಹುದ್ದೆ ಬಗ್ಗೆ ಕೇಳಿದ್ದೀರಿ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಪಾಟೀಲ್ ಎ ಎಸ್ (ನಡಹಳ್ಳಿ) : ಮಾನ್ಯ ಅಧ್ಯಕ್ಷರೇ, ಅಲ್ಲಿ ಮಾನ್ಯ ಸಚಿವರು review meeting ಮಾಡಿದರೆ ಅಲ್ಲಿ ವಾಸ್ತವಿಕ ಪರಿಸ್ಥಿತಿ ಗೋತ್ತಾಗುತ್ತದೆ. ಅದಕ್ಕೆ ನಾನು ಅವರಿಗೆ ಈಗ ಹೋಳ್ತಿದ್ದೇನೆ. ದೇವರ ಹಿಪ್ಪರಗಿ ಹೋಬಳಿಗೆ ಎಷ್ಟು ಜನ ವೈದ್ಯರು ಬೇಕಾಗಿತ್ತು ಅಷ್ಟು ಜನರನ್ನು ಕೋಡಲೇ ಬೇಕಾಗಿತ್ತು. ಅಲ್ಲಿಗೆ ಒಬ್ಬರೇ ಒಬ್ಬರು ವೈದ್ಯರನ್ನು deputation ಮೇಲೆ ಕೊಟ್ಟಿದ್ದೀರಿ. ಆದುದರಿಂದ ದಯಮಾಡಿ ದೇವರ ಹಿಪ್ಪರಗಿ ಮತಕ್ಷೇತ್ರಕ್ಕೆ permanent ಆಗಿ ವೈದ್ಯರನ್ನು ಕೊಡಿ ಹಾಗೂ ಕೇಂದ್ರದಲ್ಲಿ ನಾಲ್ಕು ಹುದ್ದೆಗಳು ಖಾಲಿ ಇವೆ.

ಅಧ್ಯಕ್ಷರು: ನೀವು ಅಲ್ಲಿ ಹುದ್ದೆಗಳು ಖಾಲಿ ಇದೆ ಎಂದು ಪ್ರಶ್ನೆಯನ್ನು ಕೇಳಿದ್ದೀರಿ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ಇಲ್ಲಿ ವ್ಯಾಖ್ಯಾನಕ್ಕೆ ಅವಕಾಶ ಇಲ್ಲ.

ಶ್ರೀ ಪಾಟೀಲ್ ಎ ಎಸ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೇ, ಬೇಡ ಬಿಡಿ, ಹಾಗಾದರೆ ಮಾತನಾಡುವುದಿಲ್ಲ. ನಾವು ಮಾತನಾಡುವುದಕ್ಕೂ ಅವಕಾಶವಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಇಲ್ಲಿ ಮಾತನಾಡುವುದಲ್ಲ, ಪ್ರಶ್ನೆಯನ್ನು ಕೇಳಬೇಕು.

ಶ್ರೀ ಪಾಟೀಲ್ ಎ ಎಸ್(ನಡಹಳ್ಳಿ): ನಾನು ಅದನ್ನೇ ಪ್ರಶ್ನೆಯನ್ನು ಕೇಳಿರುವುದು. ಅಲ್ಲಿ ಅಪಘಾತವಾಗುವುದರಿಂದ ದೇವರ ಹಿಪ್ಪರಗಿಯಲ್ಲಿ permanenet ಆಗಿ ವೈದ್ಯಾಧಿಕಾರಿಗಳು ಬೇಕೆಂದು ಅವರಿಗೆ ಹೇಳಬೇಕಲ್ಲ.

ಅಧ್ಯಕ್ಷರು: ನೀವು ಅಲ್ಲಿಗೆ ಡಾಕ್ಟರ್ ಬೇಕೆಂದು ಹೇಳಿ ಅಷ್ಟೆ ಸಾಕಲ್ಲ. ಅವರು ಉತ್ತರ ಹೇಳಲಿ, ಆಮೇಲೆ ಕೇಳಿ.

ಶ್ರೀ ಬಿ ಶ್ರೀರಾಮುಲು: ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ಹುದ್ದೇಗಳು ಖಾಲಿ ಇವೆಯೆಂದು ಹೇಳ್ತಿದ್ದಾರೆ, ಮೊನ್ನೆ ದೇವರ ಹಿಪ್ಪರಗಿ ಕ್ಷೇತ್ರಕ್ಕೆ ಐದು ಹುದ್ದೆಗಳು ಮಂಜೂರಾತಿಯಾಗಿದ್ದು, ಈಗ ಅಲ್ಲಿ ಒಂದು ಮಾತ್ರ ಭರ್ತಿಯಾಗಿದ್ದು, ಅಲ್ಲಿ ಇನ್ನೂ ನಾಲ್ಕು ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ಮೊನ್ನೆ counselingನಲ್ಲಿ ಡಾಕ್ಟರ್ ಸಾಬ್ರಿ ಎನ್ನುವವರನ್ನು

ನೇಮಕಾತಿ ಮಾಡಿ ಅವರಿಗೆ posting ಕೂಡ ಮಾಡಿದ್ದೇವೆ. ಈ ಅಧಿವೇಶನ ಮುಗಿದನಂತರ ಬಿಜಾಪುರ ಜಿಲ್ಲೆಯಲ್ಲಿ ಒಂದು meeting ಮಾಡಿ ಅಲ್ಲಿ ಏನೇನು ಸಮಸ್ಯೆಗಳು ಬರುತ್ತವೆ ಎಂದು ನೋಡಿ ಆದಷ್ಟು ಬೇಗನೆ ಪರಿಹಾರ ಮಾಡಿಕೊಡತ್ತೇನೆ.

ಶ್ರೀ ಎ ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಸಚಿವರೆ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ತಾವು ಮೊನ್ನೆ ದೇವರಹಿಪ್ಪರಗಿ ಕ್ಷೇತ್ರಕ್ಕೆ ಒಬ್ಬ lady doctor ಅನ್ನು transfer ಮಾಡಿದ್ದೀರಿ. ಅಲ್ಲಿ ಆ lady doctor 24 ಗಂಟೆಗಳ ಕಾಲ ಇರುವುದಕ್ಕೆ ಆಗುತ್ತದೆಯೇ? ಅದಕ್ಕಾಗಿ ನಾನು ಹೇಳುವಂಥದ್ದು ಏನೆಂದರೆ ಅಲ್ಲಿ ಈಗ ಒಬ್ಬರು deputation ಮೇಲೆ ಇದ್ದಾರೆ, ಅವರನ್ನು ಅಲ್ಲಿಯೇ continue ಮಾಡಿ, ಇಲ್ಲವೆಂದರೆ ಅಲ್ಲಿಗೆ permanent ಆಗಿ ಒಬ್ಬ ಪುರುಷ ವೈದ್ಯರನ್ನು ಕೊಡಿ, ಏಕೆಂದರೆ ಅಲ್ಲಿ highway ಮೇಲೆ 24 ಗಂಟೆಗಳು accident ಗಳಾಗುತ್ತವೆ ಅದನ್ನು ತಮಗೆ clarify ಮಾಡುತ್ತಿದ್ದೇನೆ. ಎರಡನೆಯದಾಗಿ, ಕಲ್ಕೇರಿಯಲ್ಲಿ ladies ಗೆ highest operations ಅಗುತ್ತಿದೆ. ಬಿಜಾಪುರ ಜಿಲ್ಲೆಯಲ್ಲಿ ಕಲ್ಕೇರಿಯ ಸಮೂದಾಯ ಕೇಂದ್ರದಲ್ಲೆ highest operations ಆಗುವಂಥದ್ದು. ಈ ಬಗ್ಗೆ ತಾವು ಬೇಕಾದರೆ ದಾಖಲಾತಿಯನ್ನು ತೆಗೆದು ನೋಡಿ. ಅಲ್ಲಿ ಒಬ್ಬರೇ ವೈದ್ಯಾಧಿಕಾರಿಗಳಿದ್ದಾರೆ, ನಾಲ್ಕು ಹುದ್ದೇಗಳು ಖಾಲಿ ಇವೆ. ತಾವು ಕನಿಷ್ಟ ಪಕ್ಷ ಇಬ್ಬರು ವೈದ್ಯಾಧಿಕಾರಿಗಳನ್ನು ತಕ್ಷಣ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ಅಲ್ಲಿ doctor deputation ಮೇಲೆ ಯಾರಿದ್ದಾರೆ, ಅವರನ್ನು ಅಲ್ಲೆ permanent ಮಾಡಿ ಕೊಡಿಯೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಅದರ ವ್ಯವಸ್ಥೆ ಮಾಡುತ್ತೇನೆ, ಮತ್ತೆ ಅದಿವೇಶನ ಮುಗಿದ ನಂತರ ಬಿಜಾಪುರದಲ್ಲಿ ಮೀಟಿಂಗ್ ಮಾಡಿ ಏನೇನು

ಸಮಸ್ಯೆಗಳು ಇವೆಯೆಂಬುದನ್ನು ಮತ್ತು ಎಲ್ಲೆಲ್ಲಿ ವೈದ್ಯರ ಕೊರತೆ ಇದೆಯೆಂಬುದನ್ನು ನ್ಯೋಡಿಕೊಂಡು ಸರಿಪಡಿಸುತ್ತೇನೆ.

ಮಂಜೂರಾದ ಹುದ್ದೆಗಳ ವಿವರ

56(151) ಶ್ರೀ ವಸಂತಬಂಗೇರ ಕೆ:(ಬೆಳ್ತಂಗಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಡಾ:ಬಿ.ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಯಲ್ಲಿರುವ ಮಂಜೂರಾದ ಹುದ್ದೆಗಳು ಎಷ್ಟು?

ಆ) ಎಷ್ಟು ಹುದ್ದೆಗಳು ಖಾಲಿ ಇರುತ್ತವೆ; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿಗೊಳಿಸಲಾಗುವುದು

ಇ) 2008–09 ಮತ್ತು 2009–10ರ ಸಾಲಿನಲ್ಲಿ ಸದ್ರಿ ಕಛೇರಿಯಲ್ಲಿರುವ ಸಿಬ್ಬಂದಿಗಳು ಪಡೆದ ಪ್ರಯಾಣ ವೆಚ್ಚದ ಮೊತ್ತ ಎಷ್ಟು? (ಮೇಲಿನ ವಿವರವನ್ನು ಶ್ರೇಣಿವಾರು ನೀಡುವುದು)

ಶ್ರೀ ಡಿ ಸುಧಾಕರ(ಸಮಾಜ ಕಲ್ಯಾಣ ಸಚಿವರು):

ಅ) 1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ. ದಕ್ಷಿಣ ಕನ್ನಡ ಜಿಲ್ಲೆ – ಒಟ್ಟು 15 ಹುದ್ದೆಗಳು.

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ – ಒಟ್ಟು 06 ಹುದ್ದೆಗಳು

ಆ)

1. ಡಾ: ಬಿ.ಆರ್.ಅಂಬೇಡ್ಕರ್ ನಿಗಮ, ದಕ್ಷಿಣ ಕನ್ನಡ ಜಿಲ್ಲೆ–ಒಟ್ಟು 09 ಹುದ್ದೆಗಳು.

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ–ಒಟ್ಟು 06 ಹುದ್ದೆಗಳು.

ಇ) ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಕ್ಷಿಣ ಕನ್ನಡ ಜಿಲ್ಲೆ.